**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿ:24-04-2020 ರಂದು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ವೀಡಿಯೊ ಸಂವಾದ ಕಾರ್ಯಕ್ರಮದ ನಡವಳಿಗಳು.**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ್ದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಇಲಾಖಾ ಅಧಿಕಾರಿಗಳು ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಸ್ವಾಗತಿಸಿ ವೀಡಿಯೊ ಸಂವಾದ ಕಾರ್ಯಕ್ರಮ ನಡೆಸಲು ಮಾನ್ಯ ಸಚಿವರನ್ನು ಕೋರಿದರು.

ಮಾನ್ಯ ಸಚಿವರು ಇಲಾಖೆಯ ಪ್ರಮುಖ ಯೋಜನೆಗಳಾದ ಗ್ರಾಮೀಣ ಕುಡಿಯುವ ನೀರು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಕೋವಿಡ್-19 ರ ತಡೆಗಡೆಕಟ್ಟುವಿಕೆ ಕುರಿತು ರಚಿಸಲಾದ ಗ್ರಾಮ ಪಂಚಾಯತ್ ಕಾರ್ಯಪಡೆಯ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

## I. ಗ್ರಾಮೀಣ ಕುಡಿಯುವ ನೀರು:

1. ರಾಜ್ಯದ ಬರಪೀಡಿತ 18 ಜಿಲ್ಲೆಗಳ 49 ತಾಲ್ಲೂಕುಗಳಿಗೆ ಸರ್ಕಾರದಿಂದ ತಲಾ ರೂ. 1.00 ಕೋಟಿಯಂತೆ ಹಾಗೂ ಇತರೆ ತಾಲ್ಲೂಕುಗಳಿಗೆ ತಲಾ ರೂ. 50.00 ಲಕ್ಷ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಟಾಸ್ಕ್‌ಫೋರ್ಸ್ ಸಮಿತಿಗಳ ಮೂಲಕ ಅಗತ್ಯ ಕ್ರಿಯಾ ಯೋಜನೆಯನ್ನು ತಯಾರಿಸಿ ಆಯುಕ್ತರ ಅನುಮೋದನೆ ಪಡೆದು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ತುರ್ತು ಕ್ರಮವಹಿಸುವುದು.

2. ಟಾಸ್ಕ್‌ಫೋರ್ಸ್-1, 2 ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿವೇಚನಾ ಅನುದಾನದಡಿ ಈವರೆವಿಗೂ ಕೆಲವು ಜಿಲ್ಲೆಗಳಿಂದ ಮಾತ್ರ ಕ್ರಿಯಾ ಯೋಜನೆಯನ್ನು ಸರ್ಕಾರದ ಮಟ್ಟದಲ್ಲಿ ಪಡೆಯಲಾಗಿದ್ದು, ಬಾಗಲಕೋಟೆ, ಬಳ್ಳಾರಿ, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಕಲಬುರ್ಗಿ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ ಮತ್ತು ಯಾದಗಿರಿ ಜಿಲ್ಲೆಗಳು ಸಹ ತುರ್ತಾಗಿ ಕ್ರಿಯಾ ಯೋಜನೆ ಸಲ್ಲಿಸಿ ಅನುಮೋದನೆ ಪಡೆಯುವುದು.

3. ಬರಪರಿಸ್ಥಿತಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಕಂದಾಯ ಇಲಾಖೆ ಹಾಗೂ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಂದ ಜಂಟಿ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಅದರಂತೆ ಕ್ರಮವಹಿಸುವುದು.

4. ಗ್ರಾಮಗಳಲ್ಲಿ ಈಗಾಗಲೇ ನಿಷ್ಕ್ರಿಯಗೊಂಡ ಬೋರ್‌ವೆಲ್ / ಕುಡಿಯುವ ನೀರಿನ ಯೋಜನೆಗಳಲ್ಲಿ ಮರು ಬಳಕೆಗೆ ಸಾಧ್ಯವಿರುವಂತಹ ಪೈಪುಗಳು, ಪಂಪ್‌ಸೆಟ್ ಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಸಂಗ್ರಹಿಸಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ **Material Bank** ಅನ್ನು ಸ್ಥಾಪಿಸುವುದು. ನಿಷ್ಕ್ರಿಯಗೊಂಡ ಕುಡಿಯುವ ನೀರಿನ ಯೋಜನೆಗಳ ವಿದ್ಯುಚ್ಛಕ್ತಿ, ಠೇವಣಿ/ಮೋಟಾರು ಇತ್ಯಾದಿಗಳನ್ನು ಟಾಸ್ಕ್‌ಫೋರ್ಸ್ / ಇತರೆ ಯೋಜನೆಗಳಲ್ಲಿ ಕೈಗೊಳ್ಳುವ ಹೊಸ ಯೋಜನೆಗಳಿಗೆ ಬಳಸಿಕೊಳ್ಳುವುದು.

5. ಬರ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರದಿಂದ ಹಂಚಿಕೆ ಮಾಡಲಾದ ಅನುದಾನವನ್ನು ಮೀರಿ ಯಾವುದೇ ಕಾರಣಕ್ಕೂ ಬೋರ್‌ವೆಲ್‌ಗಳನ್ನು ಕೊರೆಸದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ರಿಗ್ ಅಪರೇಟರ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವುದು.

6. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಕಾಲ್‌ಸೆಂಟರ್ ಗಳನ್ನು ಸ್ಥಾಪಿಸಿ ಅವುಗಳು 24/7 ಕಾರ್ಯ ನಿರ್ವಹಿಸುವುದನ್ನು ಖಾತರಿಪಡಿಸುವುದು.

7. ರೂ. 5.00 ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತದ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸುವುದು. ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ 2019-20 ರಲ್ಲಿ ಅನುಮೋದಿಸಿ ಇನ್ನು ಆರಂಭ ಮಾಡದೇ ಇರುವ ಕಾಮಗಾರಿಗಳನ್ನು ಕೈಬಿಡುವುದು.

8. ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈಗಾಗಲೇ ಅನುಮತಿ ನೀಡಿರುವುದರಿಂದ ಗ್ರಾಮೀಣ ಕುಡಿಯುವ ನೀರಿನ ಎಲ್ಲಾ ಮುಂದುವರೆದ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುವುದು.

9. ಜಲಜೀವನ ಮಿಷನ್ (JJM) ಕ್ರಿಯಾ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕೂಡಲೇ ಸಲ್ಲಿಸದಿದ್ದಲ್ಲಿ ಅನುದಾನವನ್ನು ಪಡೆಯಲು ಸಾಧ್ಯವಾಗದೇ ಇರುವುದರಿಂದ ಸಭೆಯಲ್ಲಿ ಚರ್ಚಿಸಿದಂತೆ ಮನೆ ಮನೆಗೆ ಕೊಳಾಯಿ (ನಲ್ಲಿ) ಸಂಪರ್ಕ ಕೊಡಬಹುದಾದ ಗ್ರಾಮಗಳ ಪಟ್ಟಿಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ತಯಾರಿಸಿ ಪ್ರತಿ ಗ್ರಾಮದಿಂದ "**ಗ್ರಾಮ ಕ್ರಿಯಾ ಯೋಜನೆ**" ಗಳನ್ನು ಪಡೆದುಕೊಂಡು ಜಿಲ್ಲಾ ಮಟ್ಟದಲ್ಲಿ ಕ್ರೂಢೀಕರಿಸಿ ದಿನಾಂಕ:08-05-2020 ರೊಳಗೆ ಆಯುಕ್ತರಿಗೆ ಸಲ್ಲಿಸಬೇಕೆಂದು ಸೂಚಿಸಲಾಯಿತು.

10. ರಾಜ್ಯಾದ್ಯಂತ ಶುದ್ಧ ಕುಡಿಯುವ ನೀರಿನ ಘಟಕಗಳ ಲೆಕ್ಕ ಪರಿಶೋಧನೆ ಮತ್ತು ಬಳಕೆದಾರರ ಸಮೀಕ್ಷೆಯನ್ನು M/s IPSOS RESEARCH PRIVATE LTD ಸಂಸ್ಥೆಯ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಸದರಿ ಸಂಸ್ಥೆಯು ಗ್ರಾಮಗಳಿಗೆ ಭೇಟಿ ನೀಡಿದ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ಇಲ್ಲದಿರುವುದರಿಂದ, ಇನ್ನು ಮುಂದೆ ಸದರಿ ಸಂಸ್ಥೆಯು ಗ್ರಾಮಗಳಿಗೆ ಸಮೀಕ್ಷೆಗೆ ತೆರಳುವ ಮುನ್ನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಸಂಪರ್ಕಿಸಲು ಅಗತ್ಯ ಸೂಚನೆ ನೀಡುವುದು.

## II. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

11. 2020-21ನೇ ಸಾಲಿನಲ್ಲಿ ಅತೀ ಕಡಿಮೆ (ಶೇ 20 % ಕ್ಕಿಂತ ಕಡಿಮೆ) ಮಾನವ ದಿನಗಳ ಸೃಜನೆ ಮಾಡಲಾದ ಜಿಲ್ಲೆಗಳು (ಹಾಸನ, ಬಳ್ಳಾರಿ, ಬಾಗಲಕೋಟೆ, ದಾವಣಗೆರೆ, ಕೊಪ್ಪಳ, ಗದಗ, ಮಂಡ್ಯ, ಚಿತ್ರದುರ್ಗ, ಬೀದರ್, ರಾಯಚೂರು, ಕಲಬುರ್ಗಿ ಮತ್ತು ಬೆಂಗಳೂರು) ಈ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವುದು.

12. ಕೋವಿಡ್-19ರ ಹಿನ್ನೆಲೆಯಲ್ಲಿ ವ್ಯಕ್ತಿಗಳ ನಡುವೆ ಅಂತರ ಕಾಪಾಡಿಕೊಂಡು ನರೇಗಾ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ದಿನಾಂಕ: 27-03-2020 ರಂದು ಸುತ್ತೋಲೆ ಹೊರಡಿಸಲಾಗಿದೆ. ಈ ಸುತ್ತೋಲೆ ಮಾರ್ಗದರ್ಶಿ ಸುತ್ತೋಲೆ ಮಾತ್ರ ಆಗಿದ್ದು, ಆಯಾ ಜಿಲ್ಲೆಗೆ ಸೂಕ್ತವಾಗುವಂತಹ ಜಲಾನಯನ, ಕೃಷಿ, ತೋಟಗಾರಿಕೆ, ಅರಣ್ಯೀಕರಣ ಹಾಗೂ ರೇಷ್ಮೆ ಸಾಕಾಣಿಕೆ ಇವೇ ಮುಂತಾದ ಕಾಮಗಾರಿಗಳನ್ನು ಅಳವಡಿಸಿಕೊಂಡು ಯೋಜನೆಯನ್ನು ಅನುಷ್ಠಾನಿಸುವುದು.

13. ಕೋವಿಡ್-19 ರ ಹಿನ್ನೆಲೆಯಲ್ಲಿ ಸಮುದಾಯ ಆಧಾರಿತ ಕಾಮಗಾರಿಗಳನ್ನು ಹೆಚ್ಚಾಗಿ ತೆಗೆದುಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರೆ ಇಲಾಖಾ ಅನುಷ್ಠಾನಾಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲೆಯಲ್ಲಿ ತೆಗೆದುಕೊಳ್ಳಬಹುದಾದ ಶಾಲೆ / ಅಂಗನವಾಡಿಗಳಿಗೆ ಕಿಚನ್ ಗಾರ್ಡನ್, ಸರ್ಕಾರಿ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಕಾಮಗಾರಿಗಳು, ಬೋರ್‌ವೆಲ್‌ಗಳಿಗೆ ಜಲಮರುಪೂರಣ ಕಾಮಗಾರಿಗಳು, ಶಾಲಾ ಆಟದ ಮೈದಾನ ಅಭಿವೃದ್ಧಿ, ದನದ ಕೊಟ್ಟಿಗೆ, ತೆಂಗು ಪುನಶ್ಚೇತನ ಇತ್ಯಾದಿ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮವಹಿಸುವುದು.

14. ಅಂತರ್ಜಲ ಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು **ಶ್ರೀ ರವಿಶಂಕರ ಗುರೂಜಿರವರ Art of Living** ಸಂಸ್ಥೆಯ ಸಹಯೋಗದೊಂದಿಗೆ ಕ್ರಿಯಾ ಯೋಜನೆಗಳನ್ನು ಆಯ್ದ 9 ಜಿಲ್ಲೆಗಳಲ್ಲಿ (ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಉತ್ತರಕನ್ನಡ, ಉಡುಪಿ, ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿ ಮತ್ತು ಯಾದಗಿರಿ) ತುರ್ತಾಗಿ ತಯಾರಿಸುವುದು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸದಸ್ಯರು ಗ್ರಾಮ ಪಂಚಾಯಿತಿಗಳಿಗೆ ಅಂತರ್ಜಲ ಚೇತನ ಕಾರ್ಯಕ್ರಮದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು

ವೈಜ್ಞಾನಿಕ ವಿಶ್ಲೇಷಣಾ ಮಾಹಿತಿ ಹಾಗೂ ತಾಂತ್ರಿಕ ಸಲಹೆಯನ್ನು ನೀಡುವುದರಿಂದ, ಅವರ ಸಹಯೋಗದಲ್ಲಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

15. ಕೇವಲ ಗುರಿಯನ್ನು ನಿಗದಿಪಡಿಸಿದ್ದಲ್ಲಿ ಮಾತ್ರ ಸಾಧನೆ ಸಾಧ್ಯವಾಗದಿರುವುದರಿಂದ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು Work Sheet ಅನ್ನು ಇರಿಸಿಕೊಂಡು ನಿರಂತರವಾಗಿ ಉಸ್ತುವಾರಿ ನಡೆಸುವ ಮೂಲಕ ಗುರಿ ಸಾಧನೆಗೆ ಯುದ್ದೋಪಾದಿಯಲ್ಲಿ ಶ್ರಮಿಸಲು ಕರೆ ನೀಡಿದರು.

16. ನಿಗದಿತ ಅವಧಿಯೊಳಗೆ FTO ಗಳನ್ನು ಜನರೇಟ್ ಮಾಡಿ ಕೂಲಿ ಪಾವತಿಗೆ ಕ್ರಮವಹಿಸದಿದ್ದಲ್ಲಿ ನೌಕರರು ನರೇಗಾ ಯೋಜನೆಯಡಿಯಲ್ಲಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುವುದನ್ನು ಮನಗಂಡು ನಿಗದಿತ ಕಾಲಾವಧಿಯೊಳಗೆ ಅಂದರೆ 8 ದಿನದೊಳಗೆ ಶೇ. 100 ಕೂಲಿ ಪಾವತಿಗೆ ಕ್ರಮವಹಿಸುವುದು.

17. ಕೂಲಿ ಮತ್ತು ಸಾಮಾಗ್ರಿ ಅನುಪಾತ ವ್ಯತ್ಯಾಸ ಇರುವ ಕಡೆಗಳಲ್ಲಿ ಕೂಲಿ ಪ್ರಮಾಣ ಹೆಚ್ಚಿರುವ ಕಾಮಗಾರಿಗಳನ್ನು ಹೆಚ್ಚಾಗಿ ತೆಗೆದುಕೊಂಡು ಅದನ್ನು ಸರಿಪಡಿಸಿಕೊಳ್ಳುವುದು.

## III. ಕೋವಿಡ್-19 ರ ತಡೆಗಡೆಕಟ್ಟುವಿಕೆ ಕುರಿತು ರಚಿಸಲಾದ ಗ್ರಾಮ ಪಂಚಾಯತ್ ಕಾರ್ಯಪಡೆ ಹಾಗೂ ಪಂಚಾಯತ್ ರಾಜ್ ವಿಷಯಗಳು:

ಕೋವಿಡ್-19ರ ತಡೆಗಟ್ಟುವಿಕೆಗೆ ರಚಿಸಲಾದ ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಪಡೆಯ ಸಾಧನೆಯು ಶ್ಲಾಘನೀಯವಾಗಿರುತ್ತದೆ.

18. ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಪಡೆ ಸದಸ್ಯರಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು, ಗ್ರಾಮ ಮಟ್ಟದ ಕಾರ್ಯಪಡೆಯ ಸದಸ್ಯರು ಹಾಗೂ ಕೊರೋನಾ ಸೈನಿಕರಿಗೆ ಮಾಸ್ಕ್, ಸೋಪು ಹಾಗೂ ಗ್ಲೌಸ್ ಅನ್ನು ಕಡ್ಡಾಯವಾಗಿ ಒದಗಿಸುವುದು.

19. ಗ್ರಾಮ ಮಟ್ಟದ ಕಾರ್ಯಪಡೆಯ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವುದು ಕಡ್ಡಾಯವಾಗಿದ್ದು, ಒಟ್ಟು ಗ್ರಾಮಗಳ ಪೈಕಿ ಕೇವಲ 8269 ಕಾರ್ಯಪಡೆಯ ವಿವರಗಳನ್ನು ಮಾತ್ರ ದಾಖಲಿಸಿದ್ದು, ಉಳಿದ ಗ್ರಾಮಗಳ ಮಾಹಿತಿಯನ್ನು ತುರ್ತಾಗಿ ದಾಖಲಿಸುವುದು.

20. ವಿಶೇಷ ಚೇತನರ ಬಗ್ಗೆ ಗಮನಹರಿಸಲು ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಪಡೆಗೆ ಗ್ರಾಮ ಮಟ್ಟದ ಪುನರ್ವಸತಿ ಕಾರ್ಯಕರ್ತರನ್ನೂ ಸಹ ಸೇರ್ಪಡೆಗೊಳಿಸುವುದು. ಈ ಸಂಬಂಧ ದಿನಾಂಕ:27-04-2020 ರಂದು ಸೇರ್ಪಡೆ ಆದೇಶವನ್ನು ಹೊರಡಿಸಲಾಗಿದೆ.

21. ಬಯೋಡೈವರ್‌ಸಿಟಿ ರಿಜಿಸ್ಟರ್‌ಗಳನ್ನು ತೆರೆದು ಮಾಹಿತಿ ಒದಗಿಸಲು ದಿ:15-05-2020 ಕಡೆಯ ದಿನಾಂಕವಾಗಿದ್ದು, ಈ ಬಗ್ಗೆ ಅಗತ್ಯ ಕ್ರಮವಹಿಸುವುದು.

22. 14ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯನ್ನು 20 ಜಿಲ್ಲೆಗಳ 69 ಗ್ರಾಮ ಪಂಚಾಯಿತಿಗಳಿಂದ ಈವರೆವಿಗೂ ನೀಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಕ್ರಮವಹಿಸಲು ಸೂಚಿಸಲಾಯಿತು.

23. 15ನೇ ಹಣಕಾಸು ಆಯೋಗ ಅನುದಾನದ ಕ್ರಿಯಾ ಯೋಜನೆ ತಯಾರಿಕೆ ಬಗ್ಗೆ ಅಗತ್ಯ ತರಬೇತಿ ನೀಡಿ, ಕ್ರಿಯಾ ಯೋಜನೆ ತಯಾರಿಸಲು ಕ್ರಮವಹಿಸುವುದು.

24. ಸದರಿ ಕ್ರಿಯಾ ಯೋಜನೆ ತಯಾರಿಸುವಾಗ ವಿವಿಧ ಯೋಜನೆ (ನರೇಗಾ, ಸ್ವಂತ ಸಂಪನ್ಮೂಲ, 15ನೇ ಹಣಕಾಸು ಅನುದಾನ ಇತ್ಯಾದಿ) ಗಳಡಿ ಲಭ್ಯವಾಗುವ ಅನುದಾನವನ್ನು ಗಮನಿಸಿ ಸಮಗ್ರ ಕ್ರಿಯಾ ಯೋಜನೆ ತಯಾರಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ನಡವಳಿ ತಲುಪಿದ ಕೂಡಲೇ ಅಗತ್ಯ ಕ್ರಮ ಕೈಗೊಂಡು, ಅನುಪಾಲನಾ ವರದಿಯನ್ನು ಸಂಬಂಧಪಟ್ಟ ಆಯುಕ್ತರು / ನಿರ್ದೇಶಕರಿಗೆ ನೀಡಲು ಸೂಚಿಸಿ ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

**(ಕೆ.ಎಸ್. ಈಶ್ವರಪ್ಪ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**

ಸಂಖ್ಯೆ:ಗ್ರಾಅಪ/64/ಯೋಉಮಾ/2020 ದಿನಾಂಕ: 29-04-2020

**<u>ಇವರಿಗೆ:</u>**

1. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಬೆಂಗಳೂರು.
2. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ, ಬೆಂಗಳೂರು-09.
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ನಿರ್ದೇಶಕರು, ಪಂಚಾಯತ್ ರಾಜ್ -1/ ಪಂಚಾಯತ್ ರಾಜ್ -2 / ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

5. ನಿರ್ದೇಶಕರು, ಇ-ಆಡಳಿತ - ಇಲಾಖಾ ವೆಬ್‌ಸೈಟ್ ನಲ್ಲಿ ಸದರಿ ನಡವಳಿಯನ್ನು ಅಳವಡಿಸಲು ವ್ಯವಸ್ಥೆ ಮಾಡಬೇಕಾಗಿ ಕೋರಿದೆ.
6. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು & ನೈರ್ಮಲ್ಯ ಇಲಾಖೆ.
7. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾಮೀಣ ನೀರು ಸರಬರಾಜು ಮತ್ತು & ನೈರ್ಮಲ್ಯ ಇಲಾಖೆ.

**<u>ಪ್ರತಿ ಮಾಹಿತಿಗಾಗಿ:</u>**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು.